ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ. :255/2023

ಪಿ.ಡಬ್ಲ್ಯೂಃ 1

| | |
|---|---|
| ಸಾಕ್ಷಿದಾರರ ಹೆಸರು | ಕೆ.ಸಿ.ತಿಮ್ಮಯ್ಯ |
| ತಂದೆಯ ಹೆಸರು | ಚಿಣ್ಣಪ್ಪ |
| ಪ್ರಾಯ | **65** ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕಡಿಯತ್ತೂರು ಗ್ರಾಮ |

**ದಿಃ13.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪಿರ್ಯಾದಿದಾರರ ಪರ ಶ್ರೀ.ಪಿ.ಪಿ. ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ಹಾಗೂ ನನ್ನ ತಾಯಿ ದೂರುದಾರರಾಗಿರುತ್ತೇವೆ. ಆರೋಪಿಯು ನನ್ನ ತಮ್ಮ. ನಮ್ಮ ತಂದೆಯ ಹೆಸರು ಕೆ.ಪಿ. ಚಿಣ್ಣಪ್ಪ. ನಮ್ಮ ಕುಟುಂಬಕ್ಕೆ ಮಡಿಕೇರಿ ತಾಲ್ಲೂಕಿನ ಕಡಿಯತ್ತೂರು ಗ್ರಾಮದಲ್ಲಿ ಕೃಷಿ ಭೂಮಿ ಇದೆ. ನಮ್ಮ ತಂದೆ ತಾಯಿಗೆ ಒಟ್ಟು 6 ಜನ ಮಕ್ಕಳು, ಅವರಲ್ಲಿ ಇಬ್ಬರು ಈಗಾಲೇ ಮೃತಪಟ್ಟಿರುತ್ತಾರೆ. 6 ಜನ ಮಕ್ಕಳ ಪೈಕಿ ಮೂರು ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು.

2. ನನ್ನ ತಂದೆಯವರು ಭಾರತೀಯ ಸೇನೆಯಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಸೇನೆಯಲ್ಲಿ 26 ವರ್ಷ ಕಾಲ ಸೇವೆ ಸಲ್ಲಿಸಿ 1961 ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂದೆಯವರು 2008 ರಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ತಂದೆ ಮೃತ ಪಟ್ಟ ನಂತರ ಸೌಲಭ್ಯಗಳು ನನ್ನ ತಾಯಿಗೆ ಬರುತ್ತಿದ್ದವು. ನನ್ನ ತಾಯಿಗೆ ಮಡಿಕೇರಿ ಎಸ್ ಬಿ. ಐ

ಬ್ಯಾಂಕಿನಲ್ಲಿ ಖಾತೆ ಇದ್ದು, ಸದರಿ ಖಾತೆಗೆ ಪಿಂಚಣಿ ಹಣ ಹಾಕುತ್ತಿದ್ದರು. ಖಾತೆ ತೆರೆದಾಗ ನನ್ನ ತಾಯಿ ಯಾರನ್ನೂ ಸಹ ನಾಮಿನಿ ಮಾಡಿರಲಿಲ್ಲ. ಸಾಕ್ಷಿಯು ನಿಸಿ-3 ನ್ನು ನೋಡಿ ಗುರುತಿಸಿರುತ್ತಾರೆ.

3. ನಮ್ಮ ತಂದೆ ಮೃತ ಪಟ್ಟ ನಂತರ ನಾನು, ಆರೋಪಿ, ನನ್ನ ಪತ್ನಿ ಮತ್ತು ಮಕ್ಕಳು ಮತ್ತು ನನ್ನ ತಾಯಿ ಒಂದೇ ಮನೆಯಲ್ಲಿ ವಾಸವಿದ್ದೆವು. ನಮ್ಮ ತಂದೆಯವರು ಅದೇ ಮನೆಯಲ್ಲಿ ಮೃತಪಟ್ಟಿರುತ್ತಾರೆ. 2010 ಮೇ ತಿಂಗಳಲ್ಲಿ ಆರೋಪಿಯು ಮದುವೆಯಾಗಿರುತ್ತಾರೆ. ಆನಂತರ 2 ತಿಂಗಳುಗಳ ಕಾಲ ಒಟ್ಟಿಗೆ ವಾಸವಿದ್ದೆವು. ಆನಂತರ ಅದೇ ಮನೆಯ ಬೇರೆ ಭಾಗದಲ್ಲಿ ಆರೋಪಿ ಮತ್ತು ಕುಟುಂಬ ವಾಸವಿರುತ್ತಾರೆ. ನಮ್ಮ ತಂದೆ ಮೃತ ಪಟ್ಟ ನಂತರ ಆರೋಪಿಯೇ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ಎಸ್.ಬಿ.ಐ ಮಡಿಕೇರಿ ಶಾಖೆಯಲ್ಲಿ ವ್ಯವಹಾರ ಮಾಡುತ್ತಿದ್ದರು. ಆರೋಪಿಯೇ ನನ್ನ ತಾಯಿಯ ಹೆಸರಿನಲ್ಲಿ ಸದರಿ ಶಾಖೆಯಲ್ಲಿ ಖಾತೆ ತೆರೆದಿರುತ್ತಾರೆ. ಸದರಿ ಖಾತೆಗೆ ಆರೋಪಿ ಅವರನ್ನೇ ನಾಮಿನಿ ಮಾಡಿಕೊಂಡಿರುತ್ತಾರೆ. ನಮ್ಮ ತಾಯಿಯ ಸದರಿ ಖಾತೆಯ ಸಂಪೂರ್ಣ ದಾಖಲಾತಿಗಳು ಆರೋಪಿಯ ಬಳಿಯೇ ಇತ್ತು. ತಾಯಿ ನಮ್ಮ ಜೊತೆಯಲ್ಲೇ ವಾಸವಿದ್ದರು. ನಮ್ಮ ತಂದೆಗೆ ಬರಬೇಕಾದ ಹಣ ನನ್ನ ತಾಯಿಯ ಖಾತೆಗೆ ಬಂದಾಗ ಅದನ್ನು ಆರೋಪಿಯೇ ಡ್ರಾ ಮಾಡುತ್ತಿದ್ದರು. ಆ ರೀತಿ ನಮ್ಮ ಗಮನಕ್ಕೆ ಬಾರದೆ ಡ್ರಾ ಮಾಡುತ್ತಿದ್ದರು. ಸದರಿ ಮಾಹಿತಿ ನಮ್ಮ ತಾಯಿಗೂ ಸಹ ಇರಲಿಲ್ಲ. 2008 ರಿಂದ 2015

ಜೂನ್ ವರೆಗೆ ಅಂದಾಜು 11 ಲಕ್ಷ ಹಣವನ್ನು ಆರೋಪಿಯು ಎ.ಟಿ.ಎಂ ಮೂಲಕ ಡ್ರಾ ಮಾಡಿರುತ್ತಾರೆ. 2017 ರಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾರೆ. ಸದರಿ ಹಣವನ್ನು ಬಳಸಿ ಆರೋಪಿ ನಮ್ಮ ತಾಯಿಯ ಯಾವುದೇ ಯೋಗಕ್ಷೇಮವನ್ನು ನೋಡಿಕೊಂಡಿರುವುದಿಲ್ಲ. ನಮ್ಮ ತಾಯಿ ನಮ್ಮ ಮನೆಯಲ್ಲೇ ವಾಸವಿದ್ದರು. ಆರೋಪಿ ಎಂದಿಗೂ ಸಹ ನಮ್ಮ ತಾಯಿಯ ಯೋಗಕ್ಷೇಮವನ್ನು ನೋಡಿರುವುದಿಲ್ಲ.

4. 2015 ರ ಆಗಸ್ಟ್ ತಿಂಗಳಲ್ಲಿ ನಾನು ನನ್ನ ತಾಯಿಯನ್ನು ಬ್ಯಾಂಕಿಗೆ ಕರೆದುಕೊಂಡು ಹೋದಾಗ ಆಕೆಯ ಖಾತೆಯಲ್ಲಿ ಕೇವಲ ರೂ.500/- ಮಾತ್ರ ಇತ್ತು. ಆದ್ದರಿಂದ ನಾವು ನಾಪೋಕ್ಲು ಪೋಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತೇವೆ. ನಂತರ ಬ್ಯಾಂಕಿಗೆ ನೋಟಿಸನ್ನು ನೀಡಿರುತ್ತೇವೆ. ನಂತರ 2015 ರಲ್ಲಿ ಮಡಿಕೇರಿ ಗ್ರಾಮಾಂತರ ನಿರೀಕ್ಷಕರಿಗೆ ನಾನು ದೂರು ಸಲ್ಲಿಸಿರುತ್ತೇನೆ. ಆರೋಪಿಯನ್ನು ಸದರಿ ಪೊಲೀಸರು ಕರೆಸಿ ನನ್ನ ತಾಯಿಯ ಎ.ಟಿ.ಎಂ ಕಾರ್ಡ್, ಪಾಸ್ ಪುಸ್ತಕ ಮತ್ತು ತಂದೆಯ ಡಿಸ್ಚಾರ್ಜ್ ಪುಸ್ತಕವನ್ನು ಕೊಡಿಸಿರುತ್ತಾರೆ. ಬ್ಯಾಂಕಿನವರು ಯಾವುದೇ ರೀತಿಯ ಸಹಾಯ ಮಾಡಿರುವುದಿಲ್ಲ. ಆನಂತರ ಅದಾಲತ್ ನಲ್ಲಿ ಪ್ರಕರಣ ದಾಖಲಿಸಲಾಯಿತು. ಆನಂತರ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ದಾಖಲಿಸಿರುತ್ತೇನೆ. ನಾವು ಹಲವಾರು ದೂರು ನೀಡಿದರೂ ಪೊಲೀಸರು ಆರೋಪಿಯ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆ ಕಾರಣದಿಂದ ನಾವು ಈ ಪ್ರಕರಣವನ್ನು ದಾಖಲು ಮಾಡಿದ್ದೇವೆ. ಆರೋಪಿಯು ನಮ್ಮ

ತಾಯಿಯ ಖಾತೆಯ ಹಣವನ್ನು ನಮಗೆ ತಿಳಿಯದಂತೆ ಡ್ರಾ ಮಾಡಿ ನಂಬಿಕೆ ದ್ರೋಹ ಮತ್ತು ಮೋಸ ಮಾಡಿರುತ್ತಾರೆ. ಬ್ಯಾಂಕಿನಲ್ಲಿ ವಿಚಾರಿಸಿದಾಗ ನಮ್ಮ ತಾಯಿಯ ಸಹಿಯನ್ನು ಆರೋಪಿಯೇ ನಕಲು ಮಾಡಿರುವುದು ಕಂಡು ಬಂದಿರುತ್ತದೆ. ಸಾಕ್ಷಿಯು ನಿಪಿ–1 ರಿಂದ 7ನ್ನು ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ಪಿರ್ಯಾದಿಯನ್ನು ಮತ್ತು ಅದರ ಮೇಲೆ ಇರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಅದನ್ನು ನಿಪಿ.8 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ನನ್ನ ಸಹೋದರ ಆರೋಪಿ ಸಹ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ 2005 ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ಆರೋಪಿ ನ್ಯಾಯಾಲಯದ ಮುಂದೆ ಇದ್ದು ಆತನನ್ನು ನೋಡಿ ಗುರುತಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿರ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದ**

ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.